**ಪಾಠ–7** **ಆಗಸ್ಟ್ 10–16**

# ಯೇಸು ಮತ್ತು ಅಗತ್ಯದಲ್ಲಿರುವವರು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಲೂಕ 1:46–55, 4:16–21, 7:18–23, ಮತ್ತಾಯ 12:15–21, ಮತ್ತಾಯ 21:12–16, ಮಾರ್ಕ 11:15–19, ಯೆಶಾಯ 53:3–6.

**ಸ್ಮರಣವಾಕ್ಯ : "ಕರ್ತನ ಆತ್ಮನು ನನ್ನ ಮೇಲೆ ಅದೇ ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ ಬಿಡುಗಡೆಯಾಗುವುದನ್ನು ಮತ್ತು ಕುರುಡರಿಗೆ ಕಣ್ಣು ಬರುವುದನ್ನು ಪ್ರಸಿದ್ಧಿ ಪಡಿಸುವುದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವುದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚುರಪಡಿಸುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ ಎಂಬುದು (ಲೂಕ 4:18–19).**

ಆತನ ಅವತಾರಕ್ಕಾಗಿ ಇತರ ಕಾರಣಗಳ ನಡುವೆ, ದೇವರು ಯಾವ ರೀತಿಯಲ್ಲಿ ಇದ್ದಾರೆ ಎಂಬುದನ್ನು ನಮಗೆ ತೋರಿಸಲು ಯೇಸು ಬಂದರು. ಅವನ ಬೋಧನೆಯಿಂದ, ಬಲಿದಾನದಿಂದ, ಮತ್ತು ಆತನ ಜೀವನದಿಂದ ಇದನ್ನು ಮಾಡಿದ್ದನು; ಅದೇ ರೀತಿಯಿಂದ ಆತನು ಸಾಮಾನ್ಯ ಜನರ ಸಂಗಡ ಪರಸ್ಪರ ಸಂಪರ್ಕದಲ್ಲಿದ್ದನು. ನೈಜ ಪ್ರಪಂಚದಲ್ಲಿ ಆತನ ತಕ್ಷಣದ ಕ್ರಿಯೆಗಳು ಇತರರ ಜೀವನವನ್ನು ಬದಲಾಯಿಸಿತು.

ಮೆಸ್ಸಿಯನ ಸೇವೆಯ ಅಂಶವು ಹಳೆಯ ಒಡಂಬಡಿಕೆ ಪ್ರವಾದಿಗಳಿಂದ ಯೇಸುವಿನ ತಾಯಿ ಮರಿಯಳಿಂದ ಮತ್ತು ಸ್ವತಃ ಯೇಸುವು ಸಹ ಆತನ

ಮೊದಲ ಪ್ರಸಂಗದಲ್ಲಿ ಆತನ ಧರ್ಮಪ್ರಚಾರವನ್ನು ವ್ಯಾಖ್ಯಾನಿಸುವಾಗ ಪ್ರವಾದಿಸಿದ್ದಾನೆ (ಲೂಕ 4). ಜೊತೆಗೆ, ಸುವಾರ್ತೆ ಬರಹಗಾರರು ಯೇಸು ಏನು ಮಾಡಿದ್ದಾನೆಂದು ವಿವರಿಸಲು ಅವರು ಆತನ ಕಥೆಯನ್ನು ಹೇಳುತ್ತಿದ್ದಾಗ ಹಳೆಯ ಒಡಂಬಡಿಕೆಯ ಪ್ರವಾದಿಗಳ ಭಾಷೆಯನ್ನು ಆಗಾಗ ಉಪಯೋಗಿಸುತ್ತಿದ್ದರು. ಈ ವಿಧದಲ್ಲಿ, ಯೇಸುವಿನ ಜೀವನವು ಈ ಪ್ರವಾದಿಗಳ ಪದ್ಧತಿಯಲ್ಲಿ ಸ್ಪಷ್ಟವಾಗಿ ಕಂಡುಬಂದಿತು, ಬಡವರ ಮತ್ತು ಜಟ್ಟಲ್ಪಟ್ಟವರಿಗಾಗಿ ಅವರ ಅನುಕಂಪವು ಒಳಗೊಂಡಿದೆ.

ಆದಾಗ್ಯೂ, ಧಾರ್ಮಿಕ ಮುಖಂಡರು ಯೇಸುವನ್ನು ಅಪಾಯವೆಂದು ಅರ್ಥಮಾಡಿಕೊಂಡರು. ಅನ್ಯಾಯ ಮತ್ತು ಕ್ರೌರ್ಯದ ಒಂದು ಭಯಾನಕ ಉದಾಹರಣೆಯೆಂದರೆ, ಅವರು ಯೇಸುವನ್ನು ಅನ್ಯಾಯವಾಗಿ ಬಂಧಿಸಿ, ಶಿಲುಬೆಗೇರಿಸಿದರು. ಯೇಸುವಿನಲ್ಲಿ, ಅನ್ಯಾಯವು ಎಂತಹ ರೀತಿಯ ಭಾವನೆ ಎಂದು ದೇವರು ತಿಳಿದಿದ್ದಾನೆ – ಮತ್ತು, ಆತನ ಮರಣದಲ್ಲಿ ಅವನು ದುಷ್ಟತನದ ಭೀತಿಯನ್ನು ಬಹಿರಂಗಪಡಿಸಿದನು, ಆದರೂ ಆತನ ಪುನರುತ್ಥಾನದಲ್ಲಿ, ಆತನು ಜೀವನ, ಒಳ್ಳೆಯತನ, ಮತ್ತು ರಕ್ಷಣೆಗಾಗಿ ಜಯಿಸಲ್ಪಟ್ಟನು.

**ಭಾನುವಾರ** **ಆಗಸ್ಟ್ 11**

## ಮರಿಯಳ ಹಾಡು

ದೃಶ್ಯವನ್ನು ಊಹಿಸಿ : ಕೆಲವು ದಿನಗಳ ಹಿಂದೆ ಮರಿಯಳು ಗೇಬ್ರಿಯೇಲ್ ದೇವದೂತನಿಂದ ಸಂದೇಶವನ್ನು ಸ್ವೀಕರಿಸಿದಳು. ಅವಳು ಪರಾತ್ಪರನ ಮಗನಾದ ಯೇಸುವಿನ ತಾಯಿಯಾಗುತ್ತಾಳೆಂದು ಹೇಳಿದನು. ಅವಳು ಇನ್ನೂ ಯಾರಿಗೂ ಈ ವಿಷಯವನ್ನು ಹೇಳಿರಲಿಲ್ಲ. ಆದರೆ ಅವಳ ಹಳೆಯ ಸಂಬಂಧಿ, ಪವಾಡ ಮಗುವಿಗಾಗಿ ನಿರೀಕ್ಷೆಯಲ್ಲಿದ್ದ ಎಲೀಸಬೇತಳನ್ನು ಭೇಟಿಯಾಗಲು ಹೋದಳು. ಆಧ್ಯಾತ್ಮಿಕ ಒಳನೋಟದೊಂದಿಗೆ ಮರಿಯಳು ಏನನ್ನಾದರೂ ಹೇಳುವ ಅವಕಾಶವಿರುವ ಮೊದಲೇ ಎಲಿಸಬೇತಳು ಮರಿಯಳ ಸುದ್ದಿಯನ್ನು ಗುರುತಿಸಿದಳು ಮತ್ತು ಅವರಿಬ್ಬರೂ ಒಟ್ಟಿಗೆ ದೇವರ ಒಳ್ಳೆಯತನವನ್ನು ಮತ್ತು ಭರವಸೆಗಳನ್ನು ಕೊಂಡಾಡಿದರು.

**ಲೂಕ 1:45–55 ಓದಿ. ಅವಳಿಗೆ ಮಾತ್ರ ಏನು ಅರ್ಥವಾಯಿತು– ಹೆಚ್ಚು ಸಾಮಾನ್ಯವಾಗಿ ಇರುವುದರ ನಡುವೆ ಸ್ತುತಿಯ ಮಿಶ್ರಣವನ್ನು ಗಮನಿಸಿ– "ಶಕ್ತನಾಗಿರುವಾತನು ನನಗೆ ದೊಡ್ಡ ಉಪಕಾರ ಮಾಡಿದ್ದಾನೆ" (ಲೂಕ 1:49). ದೇವರಿಗೆ ನಮ್ಮ ಸ್ತೋತ್ರ ಮತ್ತು ಆರಾಧನೆ ಏಕೆ ವೈಯಕ್ತಿಕ ಮತ್ತು ಸಾಮಾನ್ಯ ಪ್ರಾಮುಖ್ಯತೆಗಳೆರಡನ್ನು ಒಳಗೊಂಡಿರುತ್ತದೆ?**

ಇದು ಒಂದು ಗಮನಾರ್ಹವಾದ ಹಾಡು ಆಗಿದ್ದು ಕೀರ್ತನೆಗಳು ಮತ್ತು ಇಬ್ರಿಯ ಪ್ರವಾದಿಗಳ ಬರಹಗಳಲ್ಲಿ ಚೆನ್ನಾಗಿ ಹೊಂದಿಕೊಳ್ಳಬಹುದು. ಮರಿಯಳು ದೇವರಿಗೆ ಆಶ್ಚರ್ಯ ಮತ್ತು ಕೃತಜ್ಞತೆಯ ಭಾವನೆಯಿಂದ ತುಂಬಿಹೋಗಿದ್ದಾಳೆ. ಅವಳ ಸ್ವಂತ ಜೀವನದಲ್ಲಿ ದೇವರು ಕೆಲಸ ಮಾಡುತ್ತಿರುವುದನ್ನು ನಿಸ್ಸಂಶಯವಾಗಿ ಕಂಡಳು. ಆದರೆ ತನ್ನ ದೇಶಕ್ಕಾಗಿ ಮತ್ತು ಮಾನವ ಜನಾಂಗಕ್ಕಾಗಿ ದೇವರ ಯೋಜನೆಯ ದೊಡ್ಡ ಪರಿಣಾಮಗಳ ಬಗ್ಗೆ ಅವಳು ಚೆನ್ನಾಗಿ ಅರಿತಿದ್ದಳು.

ಆದರೆ ಮರಿಯಳ ಅರ್ಥದಲ್ಲಿ, ದೇವರು ಪ್ರಬಲ ಮತ್ತು ಪ್ರಶಂಸನೀಯವಾದವನು ಮಾತ್ರವಲ್ಲ, ಆತನು ಕರುಣಾಮಯಿಯು ಸಹ ಆಗಿದ್ದನು ಮತ್ತು ತಗ್ಗಿ ನಡೆಯುವ, ಕೆಳದರ್ಜೆಯ ಮತ್ತು ಬಡವರಿಗೆ ಒಂದು ನಿರ್ದಿಷ್ಟ ಪರಿಗಣೆಯನ್ನು ಕಾಣಬಹುದು. ಈ ಕೆಳಗಿನ ಹಾಡನ್ನು ಹಾಡುವ ಮೊದಲು ದೇವದೂತನು ಮರಿಯಳಿಗೆ ಸನಿಹವಾದ ಜನನದ "ಶುಭವಾರ್ತೆ"ಯನ್ನು ಸಾರಿದ ನಂತರ ಬಿಟ್ಟು ಹೋದನು : "ಪ್ರಭುಗಳನ್ನು ಸಿಂಹಾಸನಗಳಿಂದ ದೊಬ್ಬಿ ದೀನ ಸ್ಥಿತಿಯವರನ್ನು ಉನ್ನತ ಸ್ಥಿತಿಗೆ ತಂದಿದ್ದಾನೆ. ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿ ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸಿಬಿಟ್ಟಿದ್ದಾನೆ" (ಲೂಕ 1:52,53).

ಭೂಮಿಯ ಮೇಲಿನ ಯೇಸುವಿನ ಜೀವನದ ಕಥೆಯ ಆರಂಭದಲ್ಲಿ, ಅವರು ಆಡಳಿತಗಾರನಾಗಿ ಪರಿಚಯಿಸಲ್ಪಟ್ಟಿದ್ದಾನೆ (ಲೂಕ 1:43 ನೋಡಿ). ಆದರೆ ಬೇರೆ ರೀತಿಯ ಸಾಮ್ರಾಜ್ಯದ ಆಡಳಿತಗಾರನಂತೆ. ಅನೇಕ ವಿಮರ್ಶಕರು ಇದನ್ನು ವಿವರಿಸಿದಂತೆ, ಯೇಸು ದೇವರ ರಾಜ್ಯವನ್ನು ಉದ್ಘಾಟಿಸಲು ಬಂದನು ಮತ್ತು ಈ ಪ್ರಪಂಚದ ಸಾಮ್ರಾಜ್ಯಗಳ ಸಾಮಾನ್ಯ ಸಾಮಾಜಿಕ ಕ್ರಮವನ್ನು ಹೋಲಿಸಿದಾಗ "ತಲೆ–ಕೆಳಗಾದ ಸಾಮ್ರಾಜ್ಯ" ಸ್ಥಾಪಿಸಿದನು ಎಂದು ಹೇಳಲಾಗುತ್ತದೆ. ನಮಗೆ ಇರುವ ಯೇಸುವಿನ ರಾಜ್ಯದ ವಿವರಣೆಯಲ್ಲಿ, ಈ ಲೋಕದ ಪ್ರಬಲರು

ಮತ್ತು ಶ್ರೀಮಂತರು ಅಲ್ಪರೆಂದೆಣಿಸುತ್ತಾರೆ, ಮತ್ತು ಬಡವರು ಮತ್ತು ತುಳಿತಕ್ಕೊಳಗಾದವರನ್ನು ಬಿಡುಗಡೆ ಮಾಡಲಾಗಿದೆ, "ತುಂಬಿಸಲ್ಪಟ್ಟು" ಮತ್ತು ಮೇಲಕ್ಕೆತ್ತಲ್ಪಡುತ್ತಾರೆ.

**ಸಭೆಯು ದೇವರ ರಾಜ್ಯದ ಅಭಿವ್ಯಕ್ತಿಯಾಗಿರಬೇಕಾದರೆ, ಮರಿಯಳು ವಿವರಿಸಿದಂತೆ "ತಲೆಕೆಳಗಾದ ಸಾಮ್ರಾಜ್ಯ"ವನ್ನು ಮಾದರಿಯಾಗಿಸುವುದರಲ್ಲಿ ಸಭೆಯು ಹೇಗೆ ಉತ್ತಮಪಡಿಸುತ್ತದೆ? ಈ ರೀತಿಯ ಮಾದರಿಯನ್ನು ಹೇಗೆ ರೂಪಿಸಬಹುದು, ಆದರೆ ಶ್ರೀಮಂತ ಮತ್ತು ಪ್ರಬಲರಿಗೆ ಅನ್ಯಾಯವಾಗದೆ, ಕ್ರಿಸ್ತನ ಪ್ರೀತಿಯನ್ನು ಸ್ವೀಕರಿಸಿದವರು ಯಾರು?**

**ಸೋಮವಾರ** **ಆಗಸ್ಟ್ 12**

# ಯೇಸುವಿನ ಯೋಜನಾ ವರದಿ

ಅದು ಆ ದಿನಕ್ಕೆ ನಿಗದಿಪಡಿಸಲಾದ ವೇದೋಕ್ತಿಯಾಗಿರಬಹುದು ಅಥವಾ ಯೇಸು ಉದ್ದೇಶಪೂರ್ವಕವಾಗಿ, ಆತನಿಗೆ ಓದಲು ನೀಡಿದ ಸುರುಳಿಯಲ್ಲಿ ಸಂಬಂಧಿಸಿದ ವಚನಗಳನ್ನು ಕಂಡುಕೊಂಡಿದ್ದಾರೆಯೇ, ಈ ವೇದ ವಾಕ್ಯವು ಆತನ ಮೊದಲ ಸಾರ್ವಜನಿಕ ಪ್ರಸಂಗದ ವಚನಗಳು ಆಗಿದ್ದರಲ್ಲಿ ಯಾವುದೇ ಕಾಕತಾಳೀಯವಿಲ್ಲ – "ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ" (ಲೂಕ 4:21)– ಲೂಕನು ಯೇಸುವಿನ ಸಾರ್ವಜನಿಕ ಸೇವೆಯ ದಾಖಲೆಯನ್ನು ಪ್ರಾರಂಭಿಸಿದನು.

ಯೇಸು "ತಲೆಕೆಳಗಾದ ಸಾಮ್ರಾಜ್ಯ" ಎಂಬ ಮರಿಯಳ ಹಾಡಿನಿಂದ ರಾಗವನ್ನು ತೆಗೆದುಕೊಂಡಂತೆ ತೋರುತ್ತದೆ ಮತ್ತು ಆತನ ಸೇವೆಯಲ್ಲಿ ಪರಿಣಾಮಕಾರಿಯಾಗಿ, ಜಾರಿಗೆ ತರಲು ಪ್ರಾರಂಭಿಸಿದನು. ಯೇಸು ಮತ್ತು ಲೂಕನು ಯೇಸುವಿನ ಕಥೆಯನ್ನು ಪುನಃ ಹೇಳುವುದರಲ್ಲಿ– ಯೇಸು ಏನು ಮಾಡುತ್ತಿದ್ದರು ಮತ್ತು ಏನು ಮಾಡಲು ಹೊರಟಿದ್ದಾರೆ ಎಂಬುದನ್ನು ವಿವರಿಸಲು ಯೆಶಾಯನ ಪ್ರವಾದನೆಯನ್ನು ಉಪಯೋಗಿಸಿಕೊಳ್ಳುತ್ತಾನೆ, ಆದರೆ ಅದನ್ನು ಮರಿಯಳು 30 ವರ್ಷಗಳ ಹಿಂದಿಯೇ ವಿವರಿಸಿದ್ದನ್ನು ಮತ್ತು ಜಜ್ಜಲ್ಪಟ್ಟವರಿಗೆ ಯೇಸುವು ತರುವ ಶುಭವಾರ್ತೆಗೆ ವಿಶೇಷ ಗಮನವನ್ನು ಹರಿಸಿ ಸ್ವೀಕರಿಸುವಂತವರಾಗಿದ್ದಾರೆ.

ಯೇಸು ಆತನ ಯೋಜನಾ ವರದಿಯಂತೆ ಯೆಶಾಯ 61ನೇ ಅಧ್ಯಾಯದಿಂದ ಈ ವಚನಗಳನ್ನು ಅಳವಡಿಸಿಕೊಂಡಿದ್ದಾರೆ. ಆತನ ಸೇವೆ ಮತ್ತು ಯೋಜನೆಯು ಆಧ್ಯಾತ್ಮಿಕ ಮತ್ತು ಪ್ರಾಯೋಗಿಕಗಳೆರಡು ಆಗಿದೆ ಮತ್ತು ನಾವು ಕೆಲವೊಮ್ಮೆ ಊಹಿಸುವಂತೆ ಆಧ್ಯಾತ್ಮಿಕತೆ ಮತ್ತು ಪ್ರಾಯೋಗಿಕತೆಯು ದೂರದಲ್ಲಿಲ್ಲ ಎಂದು ಅವರು ಪ್ರಮಾಣೀಕರಿಸುತ್ತಾರೆ. ಯೇಸು ಮತ್ತು ಆತನ ಶಿಷ್ಯರಿಗೆ, ದೈಹಿಕವಾಗಿ ಮತ್ತು ಪ್ರಾಯೋಗಿಕವಾಗಿ ಜನರನ್ನು ಆರೈಕೆ ಮಾಡುವುದು ಕನಿಷ್ಟಪಕ್ಷ ಅವರನ್ನು ಆಧ್ಯಾತ್ಮಿಕವಾಗಿ ಆರೈಕೆ ಮಾಡುವುದರ ಭಾಗವಾಗಿತ್ತು.

**ಲೂಕ 4:16–21 ಮತ್ತು 7:18–23 ಓದಿ ಮತ್ತು ಹೋಲಿಸಿ. ಈ ರೀತಿಯಾಗಿ ಯೇಸು ಉತ್ತರಿಸಿದನೆಂದು ನೀವು ಏಕೆ ಯೋಚಿಸುತ್ತೀರಿ? ಯೇಸುವಿನ ದೈವತ್ವ ಮತ್ತು ವಿಮೋಚಕನ ಕಾರ್ಯದ ಬಗ್ಗೆ ಇರುವ ಒಂದೇ ತರಹದ ಪ್ರಶ್ನೆಗಳಿಗೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?**

ಯೇಸು ತನ್ನ ಶಿಷ್ಯರನ್ನು ಲೋಕಕ್ಕೆ ಕಳುಹಿಸಿದಾಗ, ಆತನು ಅವರಿಗೆ ಕೊಟ್ಟ ಆದೇಶವು ಸಹ ಧರ್ಮಪ್ರಚಾರದೊಂದಿಗೆ ಅನುಗುಣವಾಗಿತ್ತು. ಅವರು "ದೇವರ ರಾಜ್ಯ ಸಮೀಪವಾಗಿದೆ" (ಮತ್ತಾಯ 10:7) ಎಂದು ಘೋಷಿಸುವಾಗ, ಯೇಸು ತನ್ನ ಶಿಷ್ಯರಿಗೆ ಮತ್ತಷ್ಟು ಸೂಚನೆಗಳನ್ನು ನೀಡಿದ್ದೇನೆಂದರೆ "ರೋಗಿಗಳನ್ನು ಸ್ವಸ್ಥ ಮಾಡಿರಿ, ಸತ್ತವರನ್ನು ಬದುಕಿಸಿರಿ, ಕುಷ್ಠ ಹತ್ತಿದವರನ್ನು ಶುದ್ಧ ಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ" (ಮತ್ತಾಯ 10:8). ಯೇಸುವಿನ ಸೇವೆಯ ಮೌಲ್ಯಗಳು ಮತ್ತು ತತ್ವಗಳು ಆತನ ಹೆಸರನ್ನು ಅವರ ಸೇವೆಯಲ್ಲಿ ಪ್ರತಿಬಿಂಬಿಸುವುದಕ್ಕೆ ಮತ್ತು ಕಾರ್ಯರೂಪಕ್ಕೆ ತರಲು ಆತನು ಜನರನ್ನು ಆಹ್ವಾನಿಸಿದ್ದಾನೆ. ಶಿಷ್ಯರು ಸಹ, ಕೊನೆಯವರು, ಅಲ್ಪರು ಮತ್ತು ಕಳೆದುಹೋದವರನ್ನು ಮೇಲೆತ್ತುವುದಕ್ಕೆ ಆತನ ಸೇವೆಯಲ್ಲಿ ಯೇಸುವಿನೊಂದಿಗೆ ಸೇರಿಕೊಂಡರು.

**ಈ ಕೆಲಸವನ್ನು ಕಳೆದುಹೋದ ಲೋಕಕ್ಕೆ ಮೂರು ದೇವದೂತರ ಸಂದೇಶವನ್ನು ಸಾರುವ ನಿರ್ಣಾಯಕ ಸಂದೇಶದೊಂದಿಗೆ ನಾವು ಹೇಗೆ ಸಮತೋಲನಗೊಳಿಸುತ್ತೇವೆ?**

# ಯೇಸು ಸ್ವಸ್ಥಪಡಿಸಿದ

ಸುವಾರ್ತೆಗಳು ಯೇಸುವಿನ ಅದ್ಭುತಗಳ ಅದರಲ್ಲೂ ನಿರ್ದಿಷ್ಟವಾಗಿ ಸ್ವಸ್ಥ ಪಡಿಸುವಿಕೆಯ ಕಥೆಗಳೊಂದಿಗೆ ಬೆರೆತು ಹೋಗಿದೆ. ಯೆಶಾಯನು ಪ್ರವಾದಿಸಿದಂತೆ, ಆತನು ಕುರುಡರನ್ನು ಸ್ವಸ್ಥಪಡಿಸಿದನು ಮತ್ತು ಕೆಲವು ವರ್ಷಗಳಿಂದ ಬಳಲುತ್ತಿದ್ದ ಜನರನ್ನು ರೋಗದಿಂದ ಬಂಧಿತರಾದವರನ್ನು ಬಿಡುಗಡೆಗೊಳಿಸಿದನು (ಉದಾಹರಣೆಗೆ, ಮಾರ್ಕ 5:24–34, ಯೋಹಾನ 5:1–15 ನೋಡಿ). ಆದರೆ ಆತನು ಇದಕ್ಕಿಂತ ಹೆಚ್ಚಾಗಿ ಮಾಡಿದನು; ಆತನು ಕುಂಟರನ್ನು ಮತ್ತೆ ನಡೆಯುವಂತೆ ಮಾಡಿದನು; ಆತನು ಕುಷ್ಟರೋಗಿಗಳನ್ನು ವಾಸಿ ಮಾಡಿದನು– ಬರಿ ಮಾತಿನಿಂದ ಮಾತ್ರವಲ್ಲ ಆದರೆ ಅವರನ್ನು ಮುಟ್ಟುವ ಮೂಲಕ, ಅವರು "ಅಶುದ್ಧ"ರಾಗಿದ್ದಾಗ್ಯೂ ಕೂಡಾ; ಆತನು ಜನರ ಮನಸ್ಸನ್ನು ಮತ್ತು ದೇಹಗಳನ್ನು ಹಿಡಿದಿದ್ದ ದೆವ್ವಗಳನ್ನು ಎದುರಿಸಿದನು; ಆತನು ಸತ್ತವರನ್ನು ಸಹ ಎಬ್ಬಿಸಿದನು.

ಈ ಅದ್ಭುತಗಳು ಜನರ ಗುಂಪನ್ನು ಆಕರ್ಷಿಸುವುದರ ಬಗ್ಗೆ ಆತನ ಅನೇಕ ಅನುಮಾನಸಕ್ತರಿಗೆ ಮತ್ತು ಟೀಕೆಗಳಿಗೆ ಆತನ ಶಕ್ತಿಯನ್ನು ಸಾಬೀತುಪಡಿಸುತ್ತಿವೆ ಎಂದು ನಾವು ನಿರೀಕ್ಷಿಸಬಹುದು. ಆದರೆ ಅದು ಯಾವಾಗಲೂ ಅಲ್ಲ. ಬದಲಾಗಿ, ಯೇಸು ಸ್ವಸ್ಥ ಹೊಂದಿದ ವ್ಯಕ್ತಿಗೆ ಅದರ ಬಗ್ಗೆ ಹೇಳಬಾರದೆಂದು ಆಗಾಗ ಸೂಚನೆಗಳನ್ನು ನೀಡಿದ್ದಾರೆ. ಈ ಸೂಚನೆಗಳನ್ನು ಪಾಲಿಸಲು ಕೇವಲ ಸ್ವಸ್ಥಹೊಂದಿದ ಜನರು ಆತನ ಅದ್ಭುತಗಳ ಸುದ್ದಿಗಳನ್ನು ತಮ್ಮಷ್ಟಕ್ಕೆ ಇಟ್ಟುಕೊಳ್ಳಲು ಅಸಂಭವರಾಗಿರುವಾಗ, ಯೇಸು ತನ್ನ ಅದ್ಭುತಗಳನ್ನು ಒಂದು ಚಮತ್ಕಾರಕ್ಕಿಂತ ಹೆಚ್ಚು ಗಮನಾರ್ಹವಾದುದು ಎಂದು ತೋರಿಸಲು ಪ್ರಯತ್ನಿಸುತ್ತಿದ್ದನು. ಸಹಜವಾಗಿ, ಆತನಲ್ಲಿ ರಕ್ಷಣೆಯನ್ನು ಸ್ವೀಕರಿಸುವದು ಜನರ ಅಂತಿಮ ಗುರಿಯಾಗಿತ್ತು.

ಹೀಗಿದ್ದರೂ, ಯೇಸುವಿನ ಸ್ವಸ್ಥಪಡುವಿಕೆಯ ಅದ್ಭುತಗಳು ಆತನ ಅನುಕಂಪದ ಭಾವವಾಗಿತ್ತು. ಉದಾಹರಣೆಗೆ, 5,000 ಜನರಿಗೆ ಆಹಾರ ಒದಗಿಸುವುದಕ್ಕೆ ಮುನ್ನಡೆದಾಗ, ಮತ್ತಾಯನು "ಯೇಸು ಹೊರಗೆ ಬಂದು ಬಹುಜನರ ಗುಂಪನ್ನು ಕಂಡು ಕನಿಕರಪಟ್ಟು ಅದರಲ್ಲಿದ್ದ ರೋಗಿಗಳನ್ನು ಸ್ವಸ್ಥಪಡಿಸಿದನು (ಮತ್ತಾಯ

14:14) ಎಂದು ವರ್ಣಿಸಿದನು. ಯೇಸುವು ನೋವುಂಟು ಮಾಡುವವರ ನೋವನ್ನು ಅನುಭವಿಸಿದನು ಮತ್ತು ಅವರಿಗೆ ಸಹಾಯ ಮಾಡಲು ಮತ್ತು ಅವರನ್ನು ಮೇಲೆತ್ತಲು ಆತನ ಸಂಪರ್ಕಕ್ಕೆ ಬಂದ ಜನರಿಗೆ ಆತನು ಏನು ಮಾಡಬಹುದೋ ಅದನ್ನೇ ಮಾಡಿದನು.

**ಮತ್ತಾಯ 12:15–21ರಲ್ಲಿ ಯೆಶಾಯನ ಪ್ರವಾದನೆಯನ್ನು ಓದಿ. ಯೇಸು ಕೆಲವು ಮತ್ತು ಕೆಲವು ನೂರಾರು ರೋಗಗಳನ್ನು ಸ್ವಸ್ಥಪಡಿಸಿದ್ದಕ್ಕಿಂತ ಮಿಗಿಲಾಗಿ ಬೇರೇನು ಮಾಡಿದ್ದಾನೆ ಎಂದು ಯೆಶಾಯ ಮತ್ತು ಮತ್ತಾಯನು ಗುರುತಿಸುತ್ತಾರೆ?**

"ಕ್ರಿಸ್ತನು ಪ್ರದರ್ಶಿಸಿದ ಪ್ರತಿ ಅದ್ಭುತವೂ ಆತನ ದೈವತ್ವದ ಸಂಕೇತವಾಗಿತ್ತು. ಮೆಸ್ಸೀಯನ ಕುರಿತು ಮುಂತಿಳಿಸಿದ್ದ ಕೆಲಸಗಳನ್ನೇ ಆತನು ಮಾಡುತ್ತಿದ್ದನು; ಆದರೆ ಫರಿಸಾಯರಿಗೆ ಕರುಣೆಯ ಈ ಕ್ರಿಯೆಗಳು ಸಕಾರಾತ್ಮಕ ಅಪರಾಧವಾಗಿತ್ತು. ಯೆಹೂದ್ಯ ಮುಖಂಡರು ಮಾನವರ ಸಂಕಷ್ಟಗಳನ್ನು ಹೃದಯರಹಿತವಾದ ಉದಾಸೀನತೆಯೊಂದಿಗೆ ನೋಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವರ ಸ್ವಾರ್ಥ ಮತ್ತು ದಬ್ಬಾಳಿಕೆಯು ಕ್ರಿಸ್ತನು ಬಿಡುಗಡೆಗೊಳಿಸಿದ್ದ ಹಿಂಸೆಯನ್ನೇ ಉಂಟುಮಾಡಿತು. ಹೀಗಾಗಿ ಆತನ ಅದ್ಭುತಗಳು ನಿಂದೆಗೆ ಕಾರಣವಾಗಿವೆ"– ಎಲೆನ್ ಜಿ ವೈಟ್‌ರವರ ದಿ ಡಿಸೈರ್ ಆಫ್ ಏಜಸ್, ಪುಟ 406.

ಯೇಸುವಿನ ಸ್ವಸ್ಥತೆಯ ಅದ್ಭುತಗಳು, ಕರುಣೆ ಮತ್ತು ನ್ಯಾಯದ ಕೃತ್ಯಗಳಾಗಿವೆ. ಆದರೆ ಎಲ್ಲಾ ಸಂದರ್ಭಗಳಲ್ಲಿ ಅವುಗಳು ನಮ್ಮೊಳಗೆ ಅಂತ್ಯಗೊಂಡಿಲ್ಲ. ಅಂತಿಮವಾಗಿ ಕ್ರಿಸ್ತನು ನಿತ್ಯಜೀವಕ್ಕೆ ಜನರನ್ನು ಮುನ್ನಡೆಸುವ ಉದ್ದೇಶದಿಂದ ಮಾಡಿದನು (ಯೋಹಾನ 17:3 ನೋಡಿ).

**ಬುಧವಾರ** **ಆಗಸ್ಟ್ 14**

## ದೇವಾಲಯವನ್ನು ತೆರವುಗೊಳಿಸುವುದು

ಸುವಾರ್ತೆಗಳಲ್ಲಿ ಯೇಸುವಿನ ಕಥೆಗಳನ್ನು ಓದಿದಾಗ, ನಮಗೆ ಸಾಮಾನ್ಯವಾಗಿ ಯೇಸುವಿನ ಸೌಮ್ಯ ಸ್ವರೂಪಗಳು, ರೋಗಿ ಮತ್ತು ಮಕ್ಕಳಿಗಾಗಿ ಆತನ ಕಾಳಜಿ, ಕಳೆದುಹೋದದ್ದನ್ನು ಹುಡುಕುವ ಆತನ ಕಥೆಗಳ ಮತ್ತು ದೇವರ ರಾಜ್ಯದ ಕುರಿತು ಆತನ ಮಾತುಗಳು ಆಕರ್ಷಿಸುತ್ತಿದ್ದವು. ಈ ಕಾರಣದಿಂದಾಗಿ, ಇತರ

ಕಥೆಗಳಲ್ಲಿ, ಅದರಲ್ಲೂ ಆತನ ದಿನದ ಧಾರ್ಮಿಕ ನಾಯಕರ ಮತ್ತು ಅವರ ಕೆಲವು ಅಭ್ಯಾಸಗಳ ವಿರುದ್ಧವಾಗಿ ಆತನು ಬಲಯುತವಾಗಿ ಮತ್ತು ಮೊಂಡತನದಿಂದ ವರ್ತಿಸುತ್ತಿದ್ದನು ಎಂಬುದನ್ನು ಆಶ್ಚರ್ಯದಿಂದ ನಾವು ತೆಗೆದುಕೊಳ್ಳಬಹುದು.

**ಮತ್ತಾಯ 21:12–16, ಮಾರ್ಕ 11:15–19, ಲೂಕ 19:45–48 ಮತ್ತು ಯೋಹಾನ 2:13–17 ಓದಿ. ಸುವಾರ್ತೆ ಖಾತೆಗಳ ಪ್ರತಿಯೊಂದರಲ್ಲೂ ಈ ರೀತಿಯ ಕಥೆಗಳು ಹೇಳಲ್ಪಟ್ಟಿವೆ ಎನ್ನುವುದರ ಪ್ರಾಮುಖ್ಯತೆ ಏನು?**

ಈ ಘಟನೆಯು ಪ್ರತಿಯೊಂದು ಸುವಾರ್ತೆಗಳಲ್ಲಿ ಸೇರಿದೆ ಎಂಬುದು ಅಷ್ಟೇನೂ ಆಶ್ಚರ್ಯಕರವಲ್ಲ. ಇದು ನಾಟಕ, ಅಭಿನಯ, ಭಾವೋದ್ರೇಕದಿಂದ ತುಂಬಿದ ಕಥೆಯಾಗಿದೆ. ದೇವಾಲಯದ ಬಳಕೆಯನ್ನು ಈ ರೀತಿಯಾಗಿ ಮತ್ತು ಬಲಿದಾನದ ಪ್ರಾಣಿಗಳ ಮಾರಾಟದೊಂದಿಗೆ ಸತ್ಯಾರಾಧನೆಯನ್ನು ಬದಲಿಸುವ ಕುರಿತು ಯೇಸು ನಿಸ್ಸಂಶಯವಾಗಿ ಕಾಳಜಿ ವಹಿಸುತ್ತಿದ್ದನು. ಆ ಬಲಿದಾನಗಳನ್ನು ಪ್ರತಿನಿಧಿಸಬೇಕಾದ ಎಲ್ಲವುಗಳನ್ನು ಅಪವಿತ್ರಗೊಳಿಸುವುದು, ಅದು ಪ್ರಪಂಚದ ಪಾಪಗಳಿಗೆ ಆತನ ಬದಲಿ ಮರಣವಾಗಿತ್ತು!

ಇಬ್ರಿಯ ಪ್ರವಾದಿಗಳ ಸಂಪ್ರದಾಯದಲ್ಲಿ ಅಂತಹ ನೇರವಾದ ಕಾರ್ಯವು ಹೊಂದಿಕೊಳ್ಳುತ್ತದೆ. ಈ ಕಥೆಯಲ್ಲಿ ಏನಾಗುತ್ತಿದೆ ಎಂಬುದನ್ನು ವಿವರಿಸುವುದಕ್ಕೆ ಯೇಸು ಅಥವಾ ಸುವಾರ್ತೆಯ ಬರಹಗಾರರು ಯೆಶಾಯ, ಯೆರೆಮೀಯ ಅಥವಾ ಕೀರ್ತನೆಗಳಿಂದ ಉಲ್ಲೇಖಿಸುತ್ತಿದ್ದಾರೆ ಎಂಬ ಈ ಅಂಶವನ್ನು ಪ್ರತಿಯೊಂದು ಸುವಾರ್ತೆ ಖಾತೆಯಲ್ಲಿ ಸೂಚಿಸಲಾಗಿದೆ. ಜನರು ಯೇಸುವನ್ನು ಒಬ್ಬ ಪ್ರವಾದಿ ಎಂದು ಗುರುತಿಸಿದರು (ಮತ್ತಾಯ 21:11 ನೋಡಿ) ಮತ್ತು ಆತನು ವ್ಯಾಪಾರಿಗಳನ್ನು ಮತ್ತು ಹಣಹೂಡಿಕೆದಾರರನ್ನು ಹೊರದೂಡಿದ ನಂತರ ಆತನು ದೇವಾಲಯದ ಆವರಣದಲ್ಲಿ ಸ್ವಸ್ಥಪಡಿಸುತ್ತಾ ಮತ್ತು ಬೋಧಿಸುತ್ತಿರುವಂತೆ ಆತನ ಬಳಿಗೆ ಜನರು ಬಂದರು. ಆತನ ಸ್ಪರ್ಶದಿಂದ ಜನರು ಸ್ವಸ್ಥತೆಯನ್ನು ಹೊಂದಿದರು ಮತ್ತು ಆತನ ಬೋಧನೆಗಳನ್ನು ಅವರು ಕೇಳಿಸಿಕೊಳ್ಳುತ್ತಿದ್ದಂತೆ ತಮ್ಮ ಹೃದಯಗಳಲ್ಲಿ ಬೆಳೆಯುತ್ತಿರುವ ಭರವಸೆಯನ್ನು ಕಂಡುಕೊಂಡರು.

ಧಾರ್ಮಿಕ ನಾಯಕರು ಕೂಡಾ ಯೇಸುವನ್ನು ಪ್ರವಾದಿಯೆಂದು, ಅವರ ಅಧಿಕಾರ ಮತ್ತು ಸಾಮಾಜಿಕ ಕ್ರಮದ ಸ್ಥಿರತೆಗೆ ಅಪಾಯಕಾರಿ ವ್ಯಕ್ತಿಯಂತೆ ಗುರುತಿಸಿದರು ಮತ್ತು ಅವರ ಪೂರ್ವಜರು ಹಿಂದಿನ ಶತಮಾನಗಳಲ್ಲಿ ಪ್ರವಾದಿಗಳ ವಿರುದ್ಧವಾಗಿ ಯೋಜಿಸುತ್ತಿದ್ದ ರೀತಿಯಂತೆಯೇ ಯೇಸುವನ್ನು ಕೊಲ್ಲುವುದಕ್ಕೆ ಯೋಜಿಸಲು ಹೊರಟರು (ಲೂಕ 19:47,48ರಲ್ಲಿ ಇದಕ್ಕೆ ವಿರುದ್ಧವಾಗಿ ನೋಡಿ).

**ಸಭಾ ಸದಸ್ಯರಾಗಿ, ನಮ್ಮ ಸ್ಥಳೀಯ ಸಭೆಗಳು ಕ್ರಿಸ್ತನ ದಿನದ ದೇವಾಲಯದ ಅವಶ್ಯಕತೆ ಇರುವಂತಹ ಸ್ಥಳಗಳು ಆಗಿರಬಾರದೆಂಬುದನ್ನು ನಾವು ಖಾತ್ರಿಪಡಿಕೊಳ್ಳಲು ನಮ್ಮ ಕಾರ್ಯವನ್ನು ಹೇಗೆ ಮಾಡಬಹುದು?**

**ಗುರುವಾರ** **ಆಗಸ್ಟ್ 15**

# ಕ್ರಿಸ್ತನ ಶಿಲುಬೆ

ಆ ದೇವರು ನೋಡುವ ಮತ್ತು ಬಡವರ ಹಾಗೂ ತುಳಿತಕ್ಕೊಳಲ್ಪಟ್ಟವರ ಕೂಗನ್ನು ಕೇಳಿಸಿಕೊಂಡು ಸಂತೈಸುವ ದೇವರಾಗಿದ್ದಾನೆ. ದೇವರು ಯೇಸುವಿನಲ್ಲಿ ದೇವರಾಗಿ ಅನುಭವಿಸಿದ ಮತ್ತು ಪ್ರಪಂಚದ ಅಮಾನವೀಯತೆಯ ಕೆಟ್ಟತನವನ್ನು, ದಬ್ಬಾಳಿಕೆಯನ್ನು ಮತ್ತು ಅನ್ಯಾಯವನ್ನು ಆತನು ಸೈರಿಸಿಕೊಂಡದ್ದು ನಮ್ಮನ್ನು ಆಶ್ಚರ್ಯಗೊಳಿಸುತ್ತದೆ. ಯೇಸು ತನ್ನ ಜೀವನ ಮತ್ತು ಸೇವೆಯಲ್ಲಿ ತೋರಿಸಿದ ಎಲ್ಲಾ ಸಹಾನುಭೂತಿ ಒಳ್ಳೆಯತನದ ಹೊರತಾಗಿಯೂ, ಆತನ ಮರಣವು ದ್ವೇಷ, ಅಸೂಯೆ ಮತ್ತು ಅನ್ಯಾಯದಿಂದ ಬಂದಿತು.

ಗೆತ್ಸೇಮನೆ ತೋಟದಲ್ಲಿ ಯೇಸುವಿನ ದುಃಖದ ಪ್ರಾರ್ಥನೆಗಳಿಂದ ಆತನ ಬಂಧನ, "ವಿಚಾರಣೆಗಳು", ಚಿತ್ರಹಿಂಸೆ, ಅಪಹಾಸ್ಯ, ಶಿಲುಬೆಗೇರಿಸುವಿಕೆ, ಮತ್ತು ಮರಣದವರೆಗೂ ಆತನ ನೋವು ಕ್ರೌರ್ಯ, ಕೆಟ್ಟತನ ಮತ್ತು ದಬ್ಬಾಳಿಕೆಯ ಶಕ್ತಿಯಿಂದ ಉಂಟಾದ ಶ್ರಮೆಯನ್ನು ಸಹಿಸಿಕೊಂಡನು. ಈ ಎಲ್ಲವು ಮುಗ್ಧತೆ, ಪರಿಶುದ್ಧತೆ ಮತ್ತು ಅದನ್ನು ಅನುಭವಿಸಿದ ಒಬ್ಬನ ಒಳ್ಳೆಯತನದಿಂದ ಉಲ್ಬಣಗೊಂಡಿತು : "ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶ್ಯನಾದನು. ಹೀಗೆ ಆತನು ಆಕಾಶದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು

ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು, ವಿಧೇಯನಾದನು (ಫಿಲಿಪ್ಪಿಯವರಿಗೆ 2:7,8). ನಮಗೋಸ್ಕರ ಯೇಸು ಮಾಡಿದ ಆ ತ್ಯಾಗದ ಸೌಂದರ್ಯವನ್ನು ರಕ್ಷಣೆಯ ಕಥೆಯ ಪಾರದರ್ಶಕದ ಮೂಲಕ ನಾವು ನೋಡುತ್ತೇವೆ, ಆದರೆ ಆತನು ಅನುಭವಿಸಿದ ಸಂಕಷ್ಟ ಮತ್ತು ಅನ್ಯಾಯದ ಕ್ರೂರತೆಯನ್ನು ನಾವು ಮರೆಯಲೇಬಾರದು.

**ಯೆಶಾಯ 58:3–6 ಓದಿ ತಪ್ಪಿತಸ್ಥರಿಗಾಗಿ ಅಮಾಯಕನಾಗಿ ಬಳಲಿದ ಯೇಸುವಿಗೆ ಏನಾಯಿತು ಎನ್ನುವುದರ ಬಗ್ಗೆ ಇದು ನಮಗೆ ಏನು ಹೇಳುತ್ತದೆ? ನಮ್ಮ ಪರವಾಗಿ ಆತನು ಏನನ್ನು ಹಾದು ಹೋದನು ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದು ನಮಗೆ ಹೇಗೆ ಸಹಾಯ ಮಾಡುತ್ತದೆ?**

ದುಷ್ಟತನ ಮತ್ತು ಅನ್ಯಾಯದ ಬಲಿಪಶುವಾಗುವುದು ಯಾವ ರೀತಿಯ ಭಾವನೆಯನ್ನು ತರುತ್ತದೆ ಎಂದು ಯೇಸುವಿನಲ್ಲಿ ದೇವರು ತಿಳಿದುಕೊಂಡಿದ್ದಾರೆ. ಅಮಾಯಕ ಮನುಷ್ಯನ ಮರಣದಂಡನೆಯು ಆಕ್ರೋಶವಾಗಿದೆ; ಆದ್ದರಿಂದ ದೇವರ ಕೊಲೆಯು ಇನ್ನೂ ಹೆಚ್ಚು. ನಮ್ಮ ಮುರಿದ ಮತ್ತು ಬಿದ್ದುಹೋದ ಪರಿಸ್ಥಿತಿಯಲ್ಲಿ ದೇವರು ತನ್ನನ್ನು ತಾನೇ ಗುರುತಿಸಿಕೊಂಡಿದ್ದನ್ನು ನಾವು ಆತನ ಸಹಾನುಭೂತಿ, ಅನುಕಂಪ ಮತ್ತು ನಂಬಿಗಸ್ತಿಕೆಯನ್ನು ನಾವು ಅನುಮಾನಿಸುವಂತಿಲ್ಲ; ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು ಪಾಪ ಮಾತ್ರ ಮಾಡಲಿಲ್ಲ" (ಇಬ್ರಿಯ 4:15). ನಮ್ಮ ದೇವರ ಗುಣದ ಎಂತಹ ಒಂದು ಪ್ರಕಟನೆ! ಶಿಲುಬೆಯನ್ನು ಪ್ರತಿನಿಧಿಸುವ ದೇವರ ಬಗ್ಗೆ ಸುವಾರ್ತೆಯ ಸುತ್ತಲೂ ನಾವು ನಮ್ಮ ಮನಸ್ಸನ್ನು ಕಟ್ಟಲು ಹೇಗೆ ಪ್ರಾರಂಭಿಸುತ್ತೇವೆ?

**ಕರ್ತನಿಗಾಗಿ ನಾವು ಮಾಡುವ ಎಲ್ಲದರಲ್ಲಿಯೂ, ವಿಶೇಷವಾಗಿ ನಿರ್ಗತಿಕರನ್ನು ತಲುಪುವಲ್ಲಿ ನಮ್ಮ ಬದಲಿ ಬಲಿಯಂತೆ ಯೇಸುವಿನ ಮರಣವನ್ನು ಕೇವಲ ಸ್ವತಃ ನಮಗಷ್ಟೇ ಮಾತ್ರವಲ್ಲ ಆದರೆ ನಾವು ಸಹಾಯ ಮಾಡುವವರಿಗಾಗಿ– ನಮ್ಮ ಧರ್ಮಪ್ರಚಾರ ಮತ್ತು ಉದ್ದೇಶದ ಕೇಂದ್ರಕ್ಕಾಗಿ ನಾವು ಏಕೆ ಯಾವಾಗಲೂ ಇಟ್ಟುಕೊಳ್ಳಲೇಬೇಕು?**

**ಶುಕ್ರವಾರ** **ಆಗಸ್ಟ್ 16**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್‌ರವರ ವೆಲ್‌ಫೇರ್ ಮಿನಿಸ್ಟ್ರಿಯಲ್ಲಿ "ಇನ್ ದಿ ಫುಟ್‌ಸ್ಟೆಪ್ಸ್ ಆಫ್ ದಿ ಮಾಸ್ಟರ್" ಪುಟಗಳು 117–124; ದಿ ಮಿನಿಸ್ಟ್ರಿ ಆಫ್ ಹೀಲಿಂಗ್‌ನಲ್ಲಿ "ಡೇಸ್ ಆಫ್ ಮಿನಿಸ್ಟ್ರಿ" ಪುಟಗಳು 29–50; ದಿ ಡಿಸೈರ್ ಆಫ್ ಏಜಸ್‌ನಲ್ಲಿ "ದಿ ಟೆಂಪಲ್ ಕ್ಲೆನ್ಸ್ಡ್ ಎಗೈನ್" ಪುಟಗಳು 589–600, "ಇನ್ ಪೈಲೆಟ್ಸ್ ಜಡ್ಜ್‌ಮೆಂಟ್ ಹಾಲ್" ಪುಟ 723.

"ದೇವರು ಆತನ ಆಜ್ಞೆಯನ್ನು ಮೀರುವವರನ್ನು ಶಿಕ್ಷಿಸುವನೆಂದು ಆತನ ವಾಕ್ಯದಲ್ಲಿ ಖಚಿತವಾದ ಸಾಕ್ಷಿಯನ್ನು ನೀಡಿದ್ದಾನೆ. ಪಾಪಿಗಳ ಮೇಲೆ ನ್ಯಾಯ ನಿರ್ಣಯ ಮಾಡುವುದಕ್ಕೆ ಆತನು ತುಂಬಾ ಕರುಣಾಶಾಲಿ ಎಂದು ತಮ್ಮನ್ನು ಹೊಗಳಿಕೊಳ್ಳುವವರು ಕಲ್ವಾರಿ ಕೃಜೆಯನ್ನು ಮಾತ್ರ ನೋಡಬೇಕು. ಪಾಪವು ಕೊಡುವ ಸಂಬಳ ಮರಣಿ ದೇವರ ಆಜ್ಞೆಯ ಉಲ್ಲಂಘನೆಯು ಅದರ ಸರಿಯಾದ ಪ್ರತೀಕಾರವನ್ನು ಪಡೆಯಲೇಬೇಕು ಎಂದು ದೇವರ ನಿಷ್ಕಳಂಕ ಮಗನ ಸಾವು ಸಾಕ್ಷಿಕೊಡುತ್ತದೆ. ಪಾಪ ಜ್ಞಾನವಿಲ್ಲದ ಕ್ರಿಸ್ತನು ನಮಗಾಗಿ ಪಾಪಸ್ವರೂಪಿಯಾದನು. ಆತನೇ ಉಲ್ಲಂಘನೆಯ ಅಪರಾಧವನ್ನು ಹೊತ್ತುಕೊಂಡನು ಮತ್ತು ಆತನ ಹೃದಯ ಮುರಿಯಲ್ಪಡುವ ತನಕ ಮತ್ತು ಆತನ ಜೀವನ ನಾಶವಾಗುವ ತನಕ ಆತನ ತಂದೆಯ ಮುಖವನ್ನು ಮುಚ್ಚಿಟ್ಟಿದ್ದನು. ಪಾಪಿಯು ವಿಮೋಚಿಸಲ್ಪಡಬೇಕೆಂದು ಈ ಎಲ್ಲಾ ತ್ಯಾಗವನ್ನು ಮಾಡಿದನು. ಮನುಷ್ಯನು ಬೇರೆ ಯಾವುದೇ ಮಾರ್ಗದಿಂದಲೂ ಪಾಪದ ದಂಡನೆಯಿಂದ ಮುಕ್ತನಾಗಲು ಸಾಧ್ಯವಿರಲಿಲ್ಲ. ಮತ್ತು ಪ್ರಾಯಶ್ಚಿತ್ತದ ಪಾಲುದಾರನಾಗಲು ನಿರಾಕರಿಸುವ ಪ್ರತಿ ಆತ್ಮವೂ ತನ್ನ ಸ್ವಂತ ವ್ಯಕ್ತಿಯ ಅಪರಾಧ ಮತ್ತು ಉಲ್ಲಂಘನೆಯ ಶಿಕ್ಷೆಯನ್ನು ಹೊತ್ತಿಕೊಳ್ಳಲೇಬೇಕಾದಂತಹ ಬೆಲೆಯನ್ನು ತೆತ್ತಬೇಕು"– ಎಲೆನ್ ಜಿ ವೈಟ್‌ರವರ, ದಿ ಗ್ರೇಟ್ ಕಾಂಟ್ರೊವರ್ಸಿ, ಪುಟಗಳು 539, 540.

## ಚರ್ಚಿಸಬೇಕಾದ ಪ್ರಶ್ನೆಗಳು

1. ಎಲೆನ್ ಜಿ ವೈಟ್‌ರವರ ಮೇಲಿನ ಹೇಳಿಕೆಯನ್ನು ಓದಿ. ಅನ್ಯಾಯದ ಸತ್ಯಸ್ಥಿತಿ ಕುರಿತು ಮಾತನಾಡಿ : ತಪ್ಪಿತಸ್ಥರ ದಂಡನೆಯನ್ನು ಅನುಭವಿಸುತ್ತಿರುವ ಅಮಾಯಕ ಕ್ರಿಸ್ತನು! ಈ ನಿರ್ಣಾಯಕ ಸತ್ಯವನ್ನು ನಮ್ಮ ಮುಂದೆ ಇಟ್ಟುಕೊಳ್ಳುವುದು ಎಷ್ಟು ಮುಖ್ಯ?

2. ಯೇಸು ಉಲ್ಲೇಖಿಸಿದ "ಸಾಮ್ರಾಜ್ಯ" ದ ರೀತಿಯನ್ನು ತರಲು ಆತನು ರಾಜಕೀಯ ಸುಧಾಹರಣೆಗೆ ಎಂದಿಗೂ ಸಲಹೆ ನೀಡಲಿಲ್ಲ. ನಂತರ, ಎಲ್ಲಾ ದೀನರ ಮತ್ತು ತುಳಿತಕ್ಕೊಳಗಾದವರಿಗೆ ಸಹಾಯ ಮಾಡುವ ಹೆಸರಿನಲ್ಲಿ ಹಿಂಸಾಚಾರ ಮತ್ತು ದಬ್ಬಾಳಿಕೆಯನ್ನು ಬಳಸಿದ ಜನರ ದುಃಖಭರಿತ ಕಥೆಗಳಿಂದ ಇತಿಹಾಸವು ತುಂಬಿದೆ. ಒಂದು ಬಾರಿ ದಬ್ಬಾಳಿಕೆಯ ವರ್ಗವನ್ನು ಮತ್ತೊಂದು ವರ್ಗ ಬದಲಾಯಿಸುವುದರಿಂದ ಆಗಾಗ ಎಲ್ಲವು ಸಾಧಿಸಲ್ಪಟ್ಟವು. ಕ್ರೈಸ್ತರು ಕೂಡಾ ಮಾಡಬಹುದಾದ ಮತ್ತು ಕೆಳಗೆ ತುಳಿಯಲ್ಪಟ್ಟವರಿಗೆ ಸಹಾಯ ಮಾಡಲು ಪ್ರಯತ್ನಿಸುವ ಅಧಿಕಾರಗಳೊಂದಿಗೆ ಕೆಲಸ ಮಾಡಬೇಕಾದರೂ, ಇವುಗಳ ಅಂತ್ಯಗಳನ್ನು ಸಾಧಿಸಲು ಅವರು ರಾಜಕೀಯವನ್ನು ಯಾವಾಗಲೂ ಬಳಸಲು ಏಕೆ ಎಚ್ಚರ ವಹಿಸಲೇಬೇಕು?

3. ರಕ್ಷಣೆಯ ಯೋಜನೆ ಪ್ರವೇಶಿಸಿದ್ದು ಏಕೆ ಎಂದು ಯೋಚಿಸಿ. ಯೇಸು, ನೀತಿವಂತನು, ಅನೀತಿವಂತರಿಗಾಗಿ ಸಂಕಟಪಡುವುದು– ನಮ್ಮೆಲ್ಲರಿಗಾಗಿ ಎಂದರ್ಥ. ನಮ್ಮ ಪರವಾಗಿ ಈ ಮಹಾನ್ ಬಲಿದಾನ ಏಕೆ ಕ್ರಿಸ್ತನಲ್ಲಿ ನಮ್ಮನ್ನು ಹೊಸ ಜನರನ್ನಾಗಿ ಮಾಡಬಾರದು?

**ಸಾರಾಂಶ :** ಸುವಾರ್ತೆಗಳಲ್ಲಿ ಯೇಸುವಿನ ಸೇವೆಯು ಹಳೆಯ ಒಡಂಬಡಿಕೆ ಪ್ರವಾದಿಗಳ ಕೆಲಸಕ್ಕೆ ಸಂಬಂಧಿಸಿದಂತೆ ಪರಿಚಯಿಸಲ್ಪಟ್ಟಿದೆ ಮತ್ತು ವಿವರಿಸಲಾಗಿದೆ. ಬಡವರಿಗೆ ಶುಭವಾರ್ತೆ, ತುಳಿತಕ್ಕೊಳಗಾದವರಿಗಾಗಿ ಸ್ವಾತಂತ್ರ್ಯ ಮತ್ತು ಮನ ಮುರಿದವರಿಗಾಗಿ ಸ್ವಸ್ಥತೆಯನ್ನು ಮೆಸ್ಸೀಯನ ಗುರುತುಗಳಂತೆ ಘೋಷಿಸಲಾಯಿತು ಮತ್ತು ಯೇಸು ಆತನ ಸೇವೆಯುದ್ದಕ್ಕೂ ಪ್ರದರ್ಶಿಸಿದರು. ಆದರೂ, ಆತನ ಮರಣದಲ್ಲಿ, ಆತನು ಸಹ, ಅನ್ಯಾಯದ ಹಾನಿಯನ್ನು ಅನುಭವಿಸಿದನು ಮತ್ತು ಅಂತಿಮವಾಗಿ ಮಾನವನ ಬೀಳುವಿಕೆ ಮತ್ತು ಅಮಾನವೀಯತೆಗಳನ್ನು ಅತಿಕ್ರಮಿಸಿದರು. ನಮ್ಮ ಪರವಾಗಿ ಆತನು ಅನೀತಿಗಾಗಿ ಮರಣ ಹೊಂದಿದ್ದಕ್ಕೆ ಧನ್ಯವಾದಗಳು. ನಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ ಮತ್ತು ನಿತ್ಯಜೀವದ ವಾಗ್ದಾನವನ್ನು ನಾವು ಹೊಂದಿದ್ದೇವೆ.